ಕಾಸುಗಳ ಜತೆ ಮದಿರೆಯಿರುವುದು ಹೊಸ ಸಂಗತಿಯಲ್ಲ. ಆದರೆ ಇಷ್ಟೊಂದು ಪ್ರಮಾಣದಲ್ಲಿ ಮತ್ತು ವಿವಿಧ ಬ್ರಾಂಡುಗಳಲ್ಲಿ ಅದು ಹರಿಯುತ್ತಿರುವುದು ತಿಳಿದಿರಲಿಲ್ಲ.

ನಶೆಯ ಪದಾರ್ಥಗಳನ್ನು ಯಾರು ಹೇಗೆ ಕಂಡುಹಿಡಿದರೊ ಏನೊ? ಈಚಲಮರ ಬಗನಿಗಿಡ ಕೊರೆದಾಗ ಸ್ರವಿಸುವ ಹಾಲನ್ನು ಸೇವಿಸಿದರೆ ನಶೆಯೇರುತ್ತದೆ ಎಂದು ಕಂಡುಹಿಡಿದವರು; ಕೊಳೆಪಾಕವನ್ನು ಕುದಿಸಿ ಹೊಮ್ಮುವ ಹಬೆಯನ್ನು ತಂಪಾಗಿಸಿ ಭಟ್ಟಿ ಇಳಿಸಿದವರು, ಖಂಡಿತವಾಗಿ ರಸವಿಜ್ಞಾನಿಗಳೇ ಎಂದು ನನ್ನ ಅಭಿಮತ. ಜನ ತಮ್ಮ ಪರಿಸರದಲ್ಲಿರುವ ಹಣ್ಣು ಹೂವು, ಬಳ್ಳಿ, ಕಾಳುಗಳಿಂದ ಮದ್ಯ ತಯಾರಿಸುತ್ತ ಅನಂತ ರೂಪಗಂಧವುಳ್ಳ ನೂರಾರು ಮಾದಕರಸಗಳನ್ನು ಸೃಷ್ಟಿಸಿದರು; ಈ ರಸಗಳು ಮನುಷ್ಯ ಜೀವನದ ಆವರ್ತನೆಯಲ್ಲಿ ಸಹಜವಾಗಿ ಸೇರಿಕೊಂಡವು; ಕಡಲ ಮಂಥನದಲ್ಲಿ ಅಮೃತವೂ ವಿಷವೂ ಹುಟ್ಟಿದಂತೆ ದುರಂತ ಮತ್ತು ಸಂಭ್ರಮಗಳಿಗೆ ಮೂಲವಾದವು. ಎಂತಲೇ ಪಾನ ಪ್ರಸಂಗಗಳನ್ನು ಒಳಿತು ಕೆಡಕುಗಳ ನೈತಿಕ ಮಾನದಂಡದಲ್ಲಿ ತೀರ್ಮಾನಿಸುವುದು ಕಷ್ಟ. ಆನಂದಕ್ಕಾಗಿ ಆರೋಗ್ಯಕ್ಕಾಗಿ ರಸಸೇವನೆ ದೋಷವಲ್ಲ; ಆದರೆ ರಸವೇ ನಮ್ಮನ್ನು ಕುಡಿಯಲಾರಂಭಿಸಿದರೆ ಅದೀಗ ಶಾಪ. ಈ ಶಾಪವಿಮೋಚನೆಯ ಹಾದಿ ಯಾವುದು? 'ಕಚ್ಚಿಸಿಕೊಳ್ಳದೆ ಆಟವಾಡುವುದಾದರೆ ಹಾವಿನ ಸಂಗ ಲೇಸು' ಎಂದಳು ಅಕ್ಕ. ಕಾಯತತ್ವಕ್ಕೆ ಸಂಬಂಧಿಸಿದ ಅವಳ ಹೇಳಿಕೆ ಪಾನತತ್ವಕ್ಕೂ ಸಲ್ಲುವುದು. ಮೃದುತುಟಿಗಳಿಗೆ ತಾಗಿ ರಸವನ್ನು ದಾಟಿಸುವ ಗಾಜಿನಬಟ್ಟಲ ನುಣುಪಾದ ಅಂಚನ್ನು ಒಡೆದರೆ ಅದುವೇ ತುಟಿಸೀಳಿ ನೆತ್ತರುಕ್ಕಿಸುವ ಮೊನೆಯಾಗುತ್ತದೆ.

ದೇವತೆಗಳು ಅಮೃತಪಾನಿಗಳು ಎಂಬುದು ಸರ್ವವಿದಿತ. ಅವರ ಒಡೆಯನಾದ ಇಂದ್ರನನ್ನು ಪಾನಿಗಳ ಆದಿಮಪುರುಷ ಎನ್ನಬಹುದು. ದೇವಲೋಕದಲ್ಲಿ ಕೇವಲ ಅಮೃತ ಮಾತ್ರ ಇಲ್ಲ. ಈ ರಹಸ್ಯವನ್ನು ಕನ್ನಡಿಗರಿಗೆ ತಿಳಿಸಿದವರು ಕಿರಂ. ಅದೊಂದು ಅವರ ಅಭಿನಂದನ ಕಾರ್ಯಕ್ರಮ. ನನ್ನ ಭಾಷಣದ ಬಳಿಕ ಸಭಾಧ್ಯಕ್ಷರಾಗಿದ್ದ ಯು.ಆರ್. ಅನಂತಮೂರ್ತಿ, 'ಕಿರಂ ತನ್ನ ಕಾವ್ಯದ ಹುಚ್ಚಿನಿಂದ ನಮ್ಮನ್ನೆಲ್ಲ ಬೆಳೆಸಲಿ. ಆದರೆ ಸ್ವಲ್ಪ ಕುಡಿತ ಕಡಿಮೆ ಮಾಡಲಿ' ಎಂದು ವಿನಂತಿಭರಿತ ಹಾರೈಕೆ ಮಾಡಿದರು. ತಮ್ಮ ಪಾಳಿ ಬಂದಾಗ ಕಿರಂ, ಪಂಪನ ಕಾವ್ಯ ತೆಗೆದು ಅಲ್ಲಿರುವ ಸ್ವರ್ಗದ ವರ್ಣನೆಯನ್ನು ವಾಚಿಸತೊಡಗಿದರು. ಅಲ್ಲಿ ಸ್ವರ್ಗದಲ್ಲಿರುವ ವಿವಿಧ ನಮೂನೆಯ ರುಚಿಕರ ಮದ್ಯಗಳ ವಿವರವಿತ್ತು. ಇದಾದ ತಿಂಗಳೊಳಗೆ ಕಿರಂ ದಿವಂಗತರಾದರು. ಅವರು ಪಂಪನ ಸ್ವರ್ಗಕ್ಕೇ ಹೋಗಿರುವುದು ನಿಜವಾದರೆ, ತಮ್ಮಿಂದ ವಿದ್ವತ್ತಿಗೆ ಬದಲು ಪಾನಕಲೆಯನ್ನಷ್ಟೆ ಕಲಿತ ಶಿಷ್ಯರು ಬರುವ ತನಕ, ಅಲ್ಲಿನ ಮದ್ಯದಲ್ಲಿ ಕೆಲವು ತೊಟ್ಟನ್ನಾದರೂ ಉಳಿಸಲಿ ಎಂದು ಎರಡನೇ ಕೋರಿಕೆ ಮಂಡಿಸಬಹುದು.

ಪಾನಜಗತ್ತಿಗೆ ಅಂಬೆಗಾಲಿಟ್ಟು ಪದಾರ್ಪಣ ಮಾಡಿದ ಹೊಸತರಲ್ಲಿ ನನಗೆ ರಂ, ವಿಸ್ಕಿ, ಬ್ರಾಂದಿ, ಜಿನ್, ವೈನು, ವೋಡ್ಕಗಳ ವ್ಯತ್ಯಾಸವೇ ಗೊತ್ತಾಗಲಿಲ್ಲ. ಬಹು ದಿನದ ನಂತರ ಅವುಗಳ ನಡುವಿರುವ ರುಚಿ–ಗಂಧ–ಬಣ್ಣ–ಪರಿಣಾಮುಗಳ ಸೂಕ್ಷ್ಮಾತಿಸೂಕ್ಷ್ಮ ಫರಕು ಅರಿವಾಯಿತು. ಎಣ್ಣೆ, ತೀರ್ಥ, ಗುಂಡು, ಔಟು, ಟೈಟು, ಪರಮಾತ್ಮ, ಏರಿಸು, ಇಳಿಸು – ಇತ್ಯಾದಿ ಸರ್ವಭಾಷಾಮಯಿ ಪರಿಭಾಷೆ ಸೃಷ್ಟಿಯಾಗಿರುವುದು ವೇದ್ಯವಾಯಿತು. ಎಲ್ಲ ನಿಗೂಢ ಲೋಕಗಳೂ ತಮ್ಮ ಸಂಹವನಕ್ಕಾಗಿ ಸಾಂಕೇತಿಕ ಭಾಷೆಯನ್ನು ರೂಪಿಸಿಕೊಳ್ಳುತ್ತವೆ ಎಂದು ಕಾಣುತ್ತದೆ. ನನ್ನ ಗಮನ ಸೆಳೆದಿದ್ದು 'ಓಲ್ಡ್‌ಮಾಂಕ್', 'ಬ್ಲಾಕ್‌ಡಾಗ್' ಇತ್ಯಾದಿ ಬ್ರಾಂಡುಗಳ ಜತೆಯಿದ್ದ 'ಟೀಚರ್ಸ್ ಛಾಯ್ಸ್' ಎಂಬ ಹೆಸರು. ಸ್ವತಃ ಶಿಕ್ಷಕನಾದ ನನಗೆ ಇದೇನು ಶಿಕ್ಷಕರು